**ಸಾಕ್ಷಿಗೆ ದಿನಾಂಕಃ 09.12.2025 ರಂದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ. ಎಂ.ಡಿ. ವಕೀಲರಿಂದಃ</u>**

ನನ್ನ ಖಾಯಂ ವಿಳಾಸ ಟಿ.ನರಸೀಪುರ. ನಾನು ಮೊದಲು ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆನು. ಪಿಡಬ್ಲ್ಯೂ-3 ರವರು ನಮ್ಮ ಅಂಗಡಿಯಲ್ಲೇ ಪತ್ರಗಳನ್ನು ಬೆರಳಚ್ಚು ಮಾಡಿಸುತ್ತಿದ್ದರು. ನನಗೆ ವಾದಿ ಪರಿಚಯ ಇದ್ದರು. ಪ್ರತಿವಾದಿ ಪರಿಚಯ ಇರಲಿಲ್ಲ. ಮಾತುಕತೆ ನನ್ನ ಸಮಕ್ಷಮ ಆಗಿರುವುದಿಲ್ಲ. ನಿ.ಪಿ.1 ನ್ನು ಅನಂತೇಗೌಡ ತಯಾರು ಮಾಡಿದ್ದರು. ಅದನ್ನು ನಮ್ಮ ಅಂಗಡಿಯಲ್ಲೇ ಬೆರಳಚ್ಚು ಮಾಡಿಸಿರುತ್ತಾರೆ. ನಂತರ ನನ್ನ ಸಹಿಯನ್ನು ಸಾಕ್ಷಿದಾರರಗಾಗಿ ನಿ.ಪಿ.1 ಕ್ಕೆ ಪಡೆದಿರುತ್ತಾರೆ. ನಿ.ಪಿ.1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದಿಂದ ನನಗೆ ನೋಟಿಸು ಬಂದಿರುವುದಿಲ್ಲ. ನನ್ನನ್ನು ವಾದಿಯ ಮಗ ಕರೆದುಕೊಂಡು ಬಂದಿರುತ್ತಾರೆ. ನಾನು ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಅವರೇ ತಯಾರು ಮಾಡಿ, ವಕೀಲರ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರವನ್ನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**